## ಕರ್ನಾಟಕ ವಿಧಾನಪರಿಷತ್ತು

1 ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 503 (638)

2 ಸದಸ್ಯರ ಹೆಸರು: : ಶ್ರೀ ನಸೀರ್ ಅಹಮದ್ (ವಿಧಾನ ಸಭೆ ಕ್ಷೇತ್ರದಿಂದ ಚುನಾಯಿತರಾದವರು)

3 ಉತ್ತರಿಸಿಬೇಕಾದ ದಿನಾಂಕ: : 24.09.2020

4 ಉತ್ತರಿಸಲಿರುವ ಸಚಿವರು: : ಮಾನ್ಯ ಮುಖ್ಯಮಂತ್ರಿಯವರು

| | |
|---|---|
| ಅ) ಉತ್ತರ ಕರ್ನಾಟಕದ ಅಭಿವೃದ್ಧಿಯ ಹಿತದೃಷ್ಟಿಯಿಂದ ಬೆಳಗಾವಿಯಲ್ಲಿ ನಿರ್ಮಿಸಿದ ಸುವರ್ಣ ಸೌಧದ ಕಟ್ಟಡಕ್ಕೆ ಕೆಲವೊಂದು ಇಲಾಖೆಗಳನ್ನು (ನೀರಾವರಿ, ಸಕ್ಕರೆ, ಶಿಕ್ಷಣ, ಉಧ್ಯಮ ಹಾಗೂ ಸಮಾಜ ಕಲ್ಯಾಣ) ಮಂತ್ರಿಯಾದಿಯಾಗಿ ಸಂಪೂರ್ಣ ಸ್ಥಳಾಂತರ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ? | ಹೌದು |
| ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಯಾವ ಯಾವ ಇಲಾಖೆಗಳನ್ನು ಸ್ಥಳಾಂತರ ಮಾಡಲಾಗಿದೆ. | ಕೆಲವು ಪ್ರಮುಖ ರಾಜ್ಯ ಮಟ್ಟದ ಇಲಾಖೆಗಳನ್ನು ಶಾಶ್ವತವಾಗಿ ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕೆ ಇದ್ದು, ಪ್ರಥಮ ಹಂತದಲ್ಲಿ ಬೆಳಗಾವಿಯಲ್ಲಿನ ಬಾಡಿಗೆ ಕಟ್ಟಡದಲ್ಲಿರುವ ಸರ್ಕಾರಿ/ನಿಗಮದ ಕಛೇರಿಗಳನ್ನು ಬೆಳಗಾವಿಯ ಸುವರ್ಣ ಸೌಧಕ್ಕೆ ಸ್ಥಳಾಂತರಿಸುವುದಕ್ಕೆ ದಿನಾಂಕ:30.06.2020 ಮತ್ತು 02.07.2020ರಂದು ಅಧಿಸೂಚನೆ/ತಿದ್ದೋಲೆಯನ್ನು ಹೊರಡಿಸಲಾಗಿದೆ. ಅದರಂತೆ, 22 ಸರ್ಕಾರಿ / ನಿಗಮದ ಕಛೇರಿಗಳು ಸ್ಥಳಾಂತರಗೊಂಡಿವೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) ಉತ್ತರ ಕರ್ನಾಟಕ ಅಭಿವೃದ್ಧಿ ಹಿತದೃಷ್ಟಿಯಿಂದ ಅಲ್ಲಿಯ ಜನ ಸಾಮಾನ್ಯರಿಗೆ ಕಛೇರಿ ಕೆಲಸಕ್ಕೆ ಅನುಕೂಲವಾಗುವ ಸಲುವಾಗಿ ಹಾಗೂ ಸುವರ್ಣ ಸೌಧದ ಕಟ್ಟಡದ ಸದುಪಯೋಗಪಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? | ಸುವರ್ಣ ಸೌಧ ಕಟ್ಟಡವನ್ನು ಅಧಿವೇಶನವನ್ನು ಹೊರತುಪಡಿಸಿ ರಾಜ್ಯ ಮಟ್ಟದ ಅಂದಾಜು ಸಮಿತಿ ಸಭೆ; ಕೃಷಿ ಪಂಡಿತ ಪ್ರಶಸ್ತಿ ಸಮಾರಂಭ; ರಾಜ್ಯ ಮಟ್ಟದ ಕೃಷಿ ಸಮ್ಮೇಳನ; ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ; ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಗುಟಕಾ ಮತ್ತು ತಂಬಾಕು ಉತ್ಪನ್ನಗಳ ನಿಷೇಧ ಕುರಿತಾಗಿ ವಲಯಮಟ್ಟದ ತರಬೇತಿ; ಕರ್ನಾಟಕ ವಿಧಾನ ಮಂಡಲದ ಮತ್ತು ಪಂಚಾಯತ್ ರಾಜ್ ಇಲಾಖೆಯ ವಲಯ ಮಟ್ಟದ ಸಮಿತಿಯ ಸಭೆ; ಉನ್ನತ ಶಿಕ್ಷಣ ಇಲಾಖೆಯ ಕಾಗದ ಪತ್ರಗಳ ಸಮಿತಿ ಸಭೆ; ಸಮಾಜ ಕಲ್ಯಾಣ ಇಲಾಖೆಯ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆಗಟ್ಟುವಿಕೆ ಹಾಗೂ ಅಸ್ಪೃಶ್ಯತೆ ನಿರ್ಮೂಲನೆ ಕುರಿತಾಗಿ ಜಿಲ್ಲಾ ಮಟ್ಟದ ವಿಚಾರಣ ಸಂಕೀರ್ಣ; ಕಂದಾಯ ಇಲಾಖೆಯ ಬೆಳಗಾವಿ ಹಾಗೂ ಗುಲ್ಬರ್ಗ ವಿಭಾಗ ಮಟ್ಟದ |

| | |
|---|---|
| | ಅಧಿಕಾರಿಗಳ ಸಭೆ; ಜಲಸಂನ್ಮೂಲ ಇಲಾಖೆಯ ಅಂದಾಜು ಸಮಿತಿ ಸಭೆ; ಲೋಕೋಪಯೋಗಿ ಇಲಾಖೆಯ ಬೆಳಗಾವಿ ವೃತ್ತದ ಪ್ರಗತಿ ಪರಿಶೀಲನಾ ಸಭೆ; ನಗರಾಭಿವೃದ್ಧಿ ಇಲಾಖೆ ಭರವಸೆ ಸಮಿತಿ ಸಭೆ; ಬೆಳಗಾವಿ ಜಿಲ್ಲೆಯ ವಕ್ಫ ಆಸ್ತಿಗಳ ಸಂರಕ್ಷಣೆಗಾಗಿ ಸಹಾಯಧನ ಒದಗಿಸುವ ಕುರಿತು ಸಭೆ; ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಲೆಕ್ಕಪರಿಶೀಲನಾ ಸಭೆ; ಪ್ರವಾಸೋಧ್ಯಮ ಇಲಾಖೆಯ ಪ್ರವಾಸೋಧ್ಯಮ ಅಭಿವೃದ್ಧಿ ಪಡಿಸುವುದಕ್ಕೆ ಸಭೆ; ಜಿಲ್ಲಾ ಮಟ್ಟದ ಆಧಾರ ಕಾರ್ಯಾಗಾರ; ಮಾನವ ಹಕ್ಕುಗಳ ಅರಿವು ಜಾಗೃತ ಕಾರ್ಯಗಾರ; ಅರಣ್ಯೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರ್ಯಗಾರ; ಗ್ರಾಮ ಪಂಚಾಯತಿ ಚುನಾವಣಾ ಪೂರ್ವಸಿದ್ಧತೆ ಸಭೆ ಹಾಗೂ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಗಳನ್ನು ಸುವರ್ಣಸೌಧದ ಕಟ್ಟಡದಲ್ಲಿ ಜರುಗಿಸಿದ್ದು, ವರ್ಷ ಪೂರ್ತಿ ವಿವಿಧ ಚಟುವಟಿಕೆಗಳಿಗಾಗಿ ಸುವರ್ಣಸೌಧ ಕಟ್ಟಡವು ಸದ್ಬಳಕೆಯಾಗುತ್ತಿದೆ.<br><br>ಪ್ರಸ್ತುತ, 22 ಸರ್ಕಾರಿ / ನಿಗಮದ ಕಛೇರಿಗಳನ್ನು ಸ್ಥಳಾಂತರಿಸಲಾಗಿದ್ದು, ಅವುಗಳು ಕಾರ್ಯನಿರ್ವಹಿಸುತ್ತಿವೆ. |

ಪಿಡಿಎಸ್ 61 ಪಿಆರ್ ಐ 2020.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ.

ಚು.ರ. (ಪ್ರ). ಸಂ: 638 ಅನುಬಂಧ

| ಕ್ರ.ಸಂ | ಕಚೇರಿ/ನಿಗಮ/ಆಯೋಗ | ಆಡಳಿತ ಇಲಾಖೆ | ಅಂತಿಮವಾಗಿ ಹಂಚಿಕೆ ಮಾಡಲಾದ ಕೊಠಡಿ ಸಂಖ್ಯೆ: | ಬಾಡಿಗೆ ಮೊತ್ತ (ಪ್ರತಿ ತಿಂಗಳು ರೂ ಗಳಲ್ಲಿ) | ಬಾಡಿಗೆ ಮೊತ್ತ (ಪ್ರತಿ ವರ್ಷಕ್ಕೆ ರೂ ಗಳಲ್ಲಿ) | ಸ್ಥಳಾಂತರ ಗೊಂಡ ದಿನಾಂಕ |
|---|---|---|---|---|---|---|
| 1 | 2 | 3 | 4 | 6 | 7 | |
| 1 | ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಬೆಳಗಾವಿ | ಕೌಶಲ್ಯಾಭಿವೃದ್ಧಿ ಇಲಾಖೆ | TP2 & TP3 | 25000 | 300000 | 07-09-2020 |
| 2 | ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಳಗಾವಿ | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | TP4 | 22066 | 264792 | 18-09-2020 |
| 3 | ಹಿರಿಯ ಭೂ ವಿಜ್ಞಾನಿ, ಜಿಲ್ಲಾ ಅಂತರ್ಜಲ ಕಛೇರಿ, ಅಂತರ್ಜಲ ನಿರ್ದೇಶನಾಲಯ, ಬೆಳಗಾವಿ | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ | C37, C38, & C39 | 21350 | 256200 | 01-09-2020 |
| 4 | ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಬೆಳಗಾವಿ | ಪ್ರವಾಸೋದ್ಯಮ ಇಲಾಖೆ | C35 & C36 | 16100 | 193200 | 01-09-2020 |
| 5 | ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಳಗಾವಿ | ನಗರಾಭಿವೃದ್ಧಿ ಇಲಾಖೆ | C44 | 20000 | 240000 | 01-09-2020 |
| 6 | ವಿಶೇಷ ಜಿಲ್ಲಾಧಿಕಾರಿಗಳು, ಭೂ ಸ್ವಾಧೀನ ಪುನರ್ವಸತಿ ಮತ್ತು ಪುನರ್ ನಿರ್ಮಾಣ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ | ಕಂದಾಯ ಇಲಾಖೆ ಜಲಸಂಪನ್ಮೂಲ ಇಲಾಖೆ | 322 & 323 | 25000 | 300000 | 17-09-2020 |

ಅನುಬಂಧ

| ಕ್ರ.ಸಂ | ಕಚೇರಿ/ನಿಗಮ/ಆಯೋಗ | ಆಡಳಿತ ಇಲಾಖೆ | ಅಂತಿಮವಾಗಿ ಹಂಚಿಕೆ ಮಾಡಲಾದ ಕೊಠಡಿ ಸಂಖ್ಯೆ: | ಬಾಡಿಗೆ ಮೊತ್ತ (ಪ್ರತಿ ತಿಂಗಳು ರೂ ಗಳಲ್ಲಿ) | ಬಾಡಿಗೆ ಮೊತ್ತ (ಪ್ರತಿ ವರ್ಷಕ್ಕೆ ರೂ ಗಳಲ್ಲಿ) | ಸ್ವಾಧೀನ ಸ್ವಾಂತರ ಗೊಂಡ ದಿನಾಂಕ |
|---|---|---|---|---|---|---|
| 1 | 2 | 3 | 4 | 6 | 7 | |
| 7 | ಜಿಲ್ಲಾ ವ್ಯವಸ್ಥಾಪಕರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ<br>ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ<br>ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ ಬೆಳಗಾವಿ<br>ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ<br>ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ ಬೆಳಗಾವಿ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 104 & 105 | 750 | 9000 | 01-09-2020 |
| 8 | ಸಹಾಯಕ ಆಯುಕ್ತರು, (ಭೂ ಸ್ವಾ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಉಪವಿಭಾಗ ನಂ-2 ಬೆಳಗಾವಿ(KSHIP) | ಲೋಕೋಪಯೋಗಿ ಇಲಾಖೆ | B 13 | 25000 | 300000 | 05-09-2020 |
| 9 | ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 204 | 15000 | 180000 | 03-09-2020 |

ಅನುಬಂಧ

| ಕ್ರಸಂ | ಕಚೇರಿ/ನಿಗಮ/ಆಯೋಗ | ಆಡಳಿತ ಇಲಾಖೆ | ಅಂತಿಮವಾಗಿ ಹಂಚಿಕೆ ಮಾಡಲಾದ ಕೊಠಡಿ ಸಂಖ್ಯೆ: | ಬಾಡಿಗೆ ಮೊತ್ತ (ಪ್ರತಿ ತಿಂಗಳು ರೂ ಗಳಲ್ಲಿ) | ಬಾಡಿಗೆ ಮೊತ್ತ (ಪ್ರತಿ ವರ್ಷಕ್ಕೆ ರೂ ಗಳಲ್ಲಿ) | ಸ್ಥಳಾಂತರ ಗೊಂಡ ದಿನಾಂಕ |
|---|---|---|---|---|---|---|
| 1 | 2 | 3 | 4 | 6 | 7 | |
| 10 | ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಬೆಳಗಾವಿ | ಕೌಶಲ್ಯಾಭಿವೃದ್ಧಿ ಇಲಾಖೆ | 12 | ಉದ್ಯೋಗ ವಿನಿಮಯ ಕಛೇರಿಯಲ್ಲಿ ಒಂದು ಕೊಠಡಿಯಲ್ಲಿ | | 27–08–2020 |
| 11 | ಆಯುಕ್ತರು ಕರ್ನಾಟಕ ಮಾಹಿತಿ ಆಯೋಗ ಬೆಳಗಾವಿ | ಸಿಅಸು ಇಲಾಖೆ | 140, 141 & 142 | | | 18-05-2020 |
| 12 | ಜಂಟಿ ನಿರ್ದೇಶಕರು, ಸಹಕಾರ ಸಂಘಗಳ, ಲೆಕ್ಕಪರಿಶೋಧನಾ ಇಲಾಖೆ, ಬೆಳಗಾವಿ ಜಿಲ್ಲೆ, ಬೆಳಗಾವಿ | ಸಹಕಾರ ಇಲಾಖೆ | 16, 17, 17A & 18 | 40000 | 480000 | 01-09-2020 |
| 13 | ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ವಿಭಾಗೀಯ ಕಛೇರಿ, ಬೆಳಗಾವಿ | ಸಹಕಾರ ಇಲಾಖೆ | 23 & 24 | 5588 | 67056 | 18-09-2020 |
| 14 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ವಿಭಾಗೀಯ ಕಛೇರಿ, ಬೆಳಗಾವಿ | ಸಹಕಾರ ಇಲಾಖೆ | 25 & 26 | 2779 | 33348 | 18-09-2020 |
| 15 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಛೇರಿ, ಬೆಳಗಾವಿ | ಇಂಧನ ಇಲಾಖೆ | 63 & 64 | 25300 | 303600 | 01-09-2020 |

ಅನುಬಂಧ

| ಕ್ರ.ಸಂ | ಕಚೇರಿ/ನಿಗಮ/ಆಯೋಗ | ಆಡಳಿತ ಇಲಾಖೆ | ಅಂತಿಮವಾಗಿ ಹಂಚಿಕೆ ಮಾಡಲಾದ ಕೊಠಡಿ ಸಂಖ್ಯೆ: | ಬಾಡಿಗೆ ಮೊತ್ತ (ಪ್ರತಿ ತಿಂಗಳು ರೂ ಗಳಲ್ಲಿ) | ಬಾಡಿಗೆ ಮೊತ್ತ (ಪ್ರತಿ ವರ್ಷಕ್ಕೆ ರೂ ಗಳಲ್ಲಿ) | ಸ್ಥಳಾಂತರ ಗೊಂಡ ದಿನಾಂಕ |
|---|---|---|---|---|---|---|
| 1 | 2 | 3 | 4 | 6 | 7 | |
| 16 | ಶಿಶು ಅಭಿವೃದ್ಧಿ ಯೋಜನೆ ಕಛೇರಿ, ಬೆಳಗಾವಿ ಗ್ರಾಮೀಣ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | B4 & B5 | ಲೀಸ್ ಮೇಲೆ | | 01-09-2020 |
| 17 | ಜಂಟಿ ನಿರ್ದೇಶಕರ ಕಛೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಪಶ್ಚಿಮ ವಲಯ/ವಿಭಾಗ, ಬೆಳಗಾವಿ | ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | B12 | 26800 | 321600 | 01-09-2020 |
| 18 | ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ | ಸಮಾಜ ಕಲ್ಯಾಣ ಇಲಾಖೆ | 221 | 17000 | 204000 | 07-09-2020 |
| 19 | ಸಹಾಯಕ ಪ್ರಧಾನ ವ್ಯವಸ್ಥಾಪಕರು, ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | B1, B2 & TP1 | 750 | 9000 | 18-09-2020 |
| 20 | ಉಪ ಪ್ರಧಾನ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಬೆಳಗಾವಿ | ಸಮಾಜ ಕಲ್ಯಾಣ ಇಲಾಖೆ | 122 | 7500 | 90000 | 01-09-2020 |
| 21 | ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಬೆಳಗಾವಿ | ಸಮಾಜ ಕಲ್ಯಾಣ ಇಲಾಖೆ | 123 | 23800 | 285600 | 01-09-2020 |

ಅನುಬಂಧ

| ಕ್ರ.ಸಂ | ಕಚೇರಿ/ನಿಗಮ/ಆಯೋಗ | ಆಡಳಿತ ಇಲಾಖೆ | ಅಂತಿಮವಾಗಿ ಹಂಚಿಕೆ ಮಾಡಲಾದ ಕೊಠಡಿ ಸಂಖ್ಯೆ: | ಬಾಡಿಗೆ ಮೊತ್ತ (ಪ್ರತಿ ತಿಂಗಳು ರೂ ಗಳಲ್ಲಿ) | ಬಾಡಿಗೆ ಮೊತ್ತ (ಪ್ರತಿ ವರ್ಷಕ್ಕೆ ರೂ ಗಳಲ್ಲಿ) | ಸ್ವಾಧೀನ ಗೊಂಡ ದಿನಾಂಕ |
|---|---|---|---|---|---|---|
| 1 | 2 | 3 | 4 | 6 | 7 | |
| 22 | ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಬೆಳಗಾವಿ | ವಸತಿ ಇಲಾಖೆ/ ಜಿಲ್ಲಾಧಿಕಾರಿ | 106 & 107 | 15000 | 180000 | 18-09-2020 |
| | | | ಒಟ್ಟು ಬಾಡಿಗೆ | 334783 | 4017396 | |